TARANGA

ILLUSTRATED FAMILY KANNADA WEEKLY

Phone: 7241 Cable: TARANGA

ತರಂಗ

ಸಮಗ್ರ ಕುಟುಂಬಕ್ಕೆ ಸಮೃದ್ಧ ಸಾಪ್ತಾಹಿಕ

ದೂರವಾಣಿ : 7241 ತಂತಿ : ತರಂಗ

613–86 ಎಪ್ರಿಲ 3, 1986

ಪ್ರಿಯರು ಶ್ರೀ ಪಾಂಡುರಂಗ ಹೆಗಡೆ ಅವರಿಗೆ ವಂದನೆಗಳು.

'ಅರಣ್ಯ ಮತ್ತು ಸಮಾಜ' ಪುಸ್ತಕಕ್ಕೆ ನೀವು ಕಳಿಸಿದ ವಿಮರ್ಶೆ ತಲಪಿದೆ. ಅದನ್ನು 'ತರಂಗ'ದಲ್ಲಿ ಬಳಸಿಕೊಳ್ಳುತ್ತೇನೆ. ವಿಮರ್ಶೆ ಚೆನ್ನಾಗಿದೆ.

'ಪರಿಸರ ಕಾರ್ಯಕರ್ತನಾಗಿ' ಎರಡು ವರ್ಷ' ಲೇಖನ ಬಹಳ ದೀರ್ಘವಾಗಿರುವುದರಿಂದ ನಿಮಗೆ ಹಿಂದಿರುಗಿಸುತ್ತಿದ್ದೇನೆ.

ಧನ್ಯವಾದಗಳು,

ನಿಮ್ಮ ವಿಶ್ವಾಸಿ,

ಸಂತೋಷಕುಮಾರ ಗುಲ್ವಾಡಿ

ಸಂಪಾದಕ.

ಶ್ರೀ ಪಾಂಡುರಂಗ ಹೆಗಡೆ,
ಪರಿಸರ ಸಂರಕ್ಷಣಾ ಕೇಂದ್ರ,
ಹುಲೀಮಳ್ಳಿ ಬಿಲ್ಲಂಗ,
ಸಿರಸಿ – 581401

ಅಡಕ – ಪತ್ರದಲ್ಲಿ ಬರೆದಂತೆ.

[illegible] —ಪಾಂಡುರಂಗ ಹೆಗಡೆ [illegible]

## ಪರಿಸರ ಕಾರ್ಯಕರ್ತನಾಗಿ ಎರಡು ವರ್ಷ

### ಪೀಠಿಕೆ:

1.00 ಈ ವರದಿ ನನ್ನನ್ನು ನಾನು ಅರಿತುಕೊಳ್ಳುವ, ನನ್ನ ಕೆಲಸಗಳ ಅವಲೋಕನ ಮಾಡುವ ಒಂದು ಪ್ರಯತ್ನ. ಜನವರಿ 1983 ರಲ್ಲಿ, ಕರ್ನಾಟಕದಲ್ಲಿ, ವಿಶೇಷವಾಗಿ ಪಶ್ಚಿಮ ಘಟ್ಟಗಳಲ್ಲಿ ನಾನು ಪರಿಸರದ ಬಗ್ಗೆ ಕೆಲಸ ಮಾಡಲು ನಿರ್ಧರಿಸಿದೆ. ಅದೇ ವರ್ಷ ಚಿಪ್ಕೋ (ಅಪ್ಪಿಕೋ) ಆಂದೋಲನ ಆರಂಭವಾಗಿ ಅಲ್ಲಿಂದ ನಾನು ಪರಿಸರ ಕಾರ್ಯಕರ್ತನಾದೆ. ಈ ವರದಿ ಜನವರಿ 1983 ರಿಂದ ಫೆಬ್ರುವರಿ 1985 ರ ವರೆಗಿನ ನನ್ನ ಅನುಭವಕ್ಕೆ ಬದ್ಧವಾಗಿದೆ. ನಾನಿಲ್ಲಿ ಮಣ್ಣಿನ ಮಕ್ಕಳ ಪರಿಸರ ರಕ್ಷಿಸುವ ಚಳುವಳಿಗೆ ಸಂಬಂಧಿಸಿದಂತೆ ನನ್ನ ನೋವುನಲಿವುಗಳನ್ನು ಹೇಳುವ ಪ್ರಯತ್ನ ಮಾಡಿದ್ದೇನೆ. ಮತ್ತು ಇದನ್ನು ಇಡೀ ಭಾರತದ ಪರಿಸರ ಸಮತೋಲನ ಚಿತ್ರಕ್ಕೆ ಹೋಲಿಸಿ ನೋಡುವ ಇರಾದೆ ನನಗಿದೆ. ಈ ಪ್ರಯತ್ನ ವಸ್ತುಬದ್ಧವಾಗಿದ್ದು, ಈ ಕುರಿತು ಟೀಕೆ, ಟಿಪ್ಪಣಿ ಮತ್ತು ಸಲಹೆಗಳನ್ನು ಹಾರ್ದಿಕವಾಗಿ ಸ್ವಾಗತಿಸುತ್ತೇನೆ.

2.00 ಹಿನ್ನೆಲೆ : ದಿಲ್ಲಿ ವಿಶ್ವವಿದ್ಯಾಲಯದ ಸಾಮಾಜಿಕ ಕಾರ್ಯದ ವಿಭಾಗದಲ್ಲಿ ನನ್ನ ಸ್ನಾತಕೋತ್ತರ ಪದವಿ ಬಗ್ಗೆ ಅಭ್ಯಾಸ ಮಾಡುತ್ತಿರುವ ಸಮಯದಲ್ಲಿ ನನಗೆ ಚಿಪ್ಕೋ ಸುಂದರಲಾಲ ಬಹುಗುಣರ ಸಂಪರ್ಕವಾಯಿತು. ಚಿಪ್ಕೋ ಚಳವಳಿಯಲ್ಲಿ ಭಾಗವಹಿಸಲು ನಾನು ಹಿಮಾಲಯಕ್ಕೆ ಹೋದೆ. ಇದು ನನ್ನ ಸ್ನಾತಕೋತ್ತರ ಅಭ್ಯಾಸದ ಒಂದು ಅಂಗವಾಗಿತ್ತು. 1979ರಲ್ಲಿ ನಾನು ವಿಶ್ವವಿದ್ಯಾಲಯಕ್ಕೆ ಮೊದಲಿಗನಾಗಿ ನನ್ನ ಸ್ನಾತಕೋತ್ತರ ಪದವಿಗಳಿಸಿದೆ. ಇದರೊಂದಿಗೆ ನಾನು ನೌಕರಿ ಹುಡುಕುವವರ ಸಂತೆಯಲ್ಲಿ ಸೇರಿದೆ. ನಾನು ಹಳ್ಳಿಗಳ ಏಳ್ಗೆಗಾಗಿ ಹಳ್ಳಿಗಳಲ್ಲಿ ದುಡಿಯಲು ನಿರ್ಧರಿಸಿದೆ. ಈ ಹಂಬಲದಿಂದ ನಾನು ಮಧ್ಯಪ್ರದೇಶದ ದಾಮೋಹ ಎಂಬ ಜಿಲ್ಲೆಗೆ ಬಂದೆ. ಅಲ್ಲಿಯ ಸ್ವಯಂ ಸೇವಾ ಸಂಸ್ಥೆಯಾದ ಗ್ರಾಮೀಣ ಕೃಷಿಕ ಕೇಂದ್ರವನ್ನು ಸೇರಿದೆ.

2.2 ದಾಮೋಹದಲ್ಲಿಯ ಮುಖ್ಯ ಕೆಲಸ ಭೂರಹಿತ ಕೂಲಿಕಾರರ ಮಧ್ಯೆ ಇದ್ದುಕೊಂಡು ಅವರನ್ನು ಸಂಘಟಿಸಿ ಅವರು ತಮ್ಮ ಹಕ್ಕುಗಳಿಗಾಗಿ ಹೋರಾಡುವಂತೆ ಮಾಡುವುದಾಗಿತ್ತು. ಕೆಲವು ಹಳ್ಳಿಗಳಲ್ಲಿ ನಾವು ಯಶಸ್ಸು ಕಂಡರೂ ಹೆಚ್ಚಿನ ಜನರ ಮೇಲೆ ಇದರ ಪರಿಣಾಮವಾಗಲಿಲ್ಲ. ಈ ಜಿಲ್ಲೆ ಮೇಲಿಂದ ಮೇಲೆ ಬರಗಾಲಕ್ಕೀಡಾಗುತ್ತಿತ್ತು. ಇಂಥ ಪರಿಸ್ಥಿತಿಯಲ್ಲಿ ಜನರಿಗೆ ತಿಳುವಳಿಕೆ ಕೊಟ್ಟು ಅವರನ್ನು ಸಂಘಟಿಸಿದರೆ ಅವರು ತಮ್ಮ ಜೀವನದ ಸಮಸ್ಯೆಯನ್ನು ಬಗೆಹರಿಸಿಕೊಳ್ಳಬಹುದು ಎಂಬುದು ನಮ್ಮ ನಂಬಿಗೆಯಾಗಿತ್ತು. (ಹೆಚ್ಚಾಗಿ ಗ್ರಾಮೀಣ ವಿಕಾಸದ ಪ್ರಯತ್ನಗಳು ಇದೇ ನಂಬಿಗೆಯನ್ನೇ ಆಧಾರವಾಗಿಟ್ಟುಕೊಂಡಿರುತ್ತವೆ.) ಬಡಜನರ ಸ್ಥಿತಿಯಲ್ಲಿ ಪ್ರಭುತ್ವ ವಿರುದ್ಧ ಆರ್ಥಿಕ ನ್ಯಾಯ ತಮ್ಮಿಂದ ತಾನೇ ಸಾಧಿತವಾಗುತ್ತದೆಂಬುದೇ ನಮ್ಮ ವಿಚಾರ. ಆದರೆ ಬಡಜನರನ್ನು ಹಣ್ಣು ಮಾಡುವ ಬರಗಾಲದಂಥ ಪ್ರಕೃತಿ ವಿಕೋಪ ಪ್ರತಿ ವರ್ಷವೂ ಬರುತ್ತಿತ್ತು. ಸಂಘಟಿತ ಕಾರ್ಮಿಕರು ಆಹಾರಕ್ಕಾಗಿ ಕೆಲಸ ಕೊಡಬೇಕೆಂದು ಸರಕಾರದೊಡನೆ ಹೋರಾಡುತ್ತಿದ್ದರು. ಇದರಿಂದ ಬರಗಾಲವೇನೂ ತಪ್ಪಲಿಲ್ಲ. ನಾವು ರೋಗದ ಮೂಲಕಾರಣವನ್ನು ಬಿಟ್ಟು ರೋಗದ ಹೊರ ಲಕ್ಷಣಗಳನ್ನು ಮಾತ್ರ ವಾಸಿ ಮಾಡುವಲ್ಲಿ ತೊಡಗಿದ್ದೆವು. ಹಳ್ಳಿಯ ಬಡತನ ಮತ್ತು ಏಳ್ಗೆಗಾಗಿ ಕೆಲಸ ಮಾಡುವಾಗ ಹಳ್ಳಿಯ ಬಗ್ಗೆ ಸಮಗ್ರ ದೃಷ್ಟಿಯು (ಪರಿಸರದ ಸಮಸ್ಯೆಯೂ ಸೇರಿದಂತೆ) ಅವಶ್ಯಕತೆಯಿದೆ. ಸಾಮಾಜಿಕ ನ್ಯಾಯದ ಜೊತೆಗೆ ಪ್ರಕೃತಿ ಸಂಪತ್ತಿನ ರಕ್ಷಣೆ ಮಹತ್ವದ್ದಾಗಿದೆ.

...2

2.3 ಮಧ್ಯಪ್ರದೇಶದ ಹಳ್ಳಿಗಳಲ್ಲಿ ಮೂರು ವರ್ಷ ಕೆಲಸ ಮಾಡಿದ ಮೇಲೆ ಹೊರಗಿನಿಂದ ಹೋಗಿ ಕೆಲಸ ಮಾಡುವವನ ಮಿತಿ ನನ್ನ ಅರಿವಿಗೆ ಬಂತು. ಅಲ್ಲಿಯ ಸ್ಥಳೀಯ ಬುಂದೇಲಿ ಭಾಷೆಯನ್ನು ನಾನು ಕಲಿತು ಹಳ್ಳಿಗರೊಡನೆ ಬೆರೆತೆ. ಆದರೂ ಅವರ ಸಾಂಸ್ಕೃತಿಕ ಜಗತ್ತಿನ ನನ್ನ ಅರಿವು ತೀರ ಮಿತವಾಗಿತ್ತು. ದಾಮೋಹದ ಬಡಜನರನ್ನು ಸಂಘಟಿಸಬೇಕೆಂಬ ನಿಖರವಾದ ತಿಳುವಳಿಕೆ ನನಗಿದ್ದರೂ, ಅವರೊಡನಿದ್ದೂ ನನ್ನಿಂದ ಆ ಜನರ ಹೃದಯಂತರವನ್ನು ಮುಟ್ಟಲಾಗಲಿಲ್ಲ. ಕಾರಣ ಅಲ್ಲಿಯ ಯುವಕರನ್ನೇ ಸಂಘಟನೆಯ ಕೆಲಸಕ್ಕೆ ತೊಡಗಿಸುವುದು ಯೋಗ್ಯವೆಂದು ನಾನು ನಿರ್ಧಾರ ಮಾಡಿದೆ. ಗ್ರಾಮೀಣ ಜನರೊಡನೆ ಕಾರ್ಯ ಮಾಡುವ ಅನುಭವದೊಂದಿಗೆ ನಾನು 1982, ಡಿಸೆಂಬರಲ್ಲಿ ದಾಮೋಹರಕ್ಕೆ ವಿದಾಯ ಹೇಳಿದೆ.

2.4 1982 ರ ಡಿಸೆಂಬರದಲ್ಲಿ ನಾನು ಸುಂದರಲಾಲ ಬಹುಗುಣರನ್ನು ಕೂಡಿಕೊಂಡು ಕಾಶ್ಮೀರ – ಕೊಹಿಮಾ ಚಿಪ್ಕೋ ಪಾದಯಾತ್ರೆಯಲ್ಲಿ ಭಾಗವಹಿಸಿದೆ. ಭೂತಾನದಲ್ಲಿ ನಾವಿಬ್ಬರೂ ಕೂಡಿ ಅಲ್ಲಿಯ ದುರ್ಗಮ ಭಾಗಗಳಲ್ಲಿ ಸಂಚರಿಸಿದೆವು. ಕರ್ನಾಟಕದಲ್ಲಿ ಪರಿಸರದ ಬಗ್ಗೆ ಕೆಲಸ ಮಾಡುವ ನನ್ನ ಯೋಜನೆಯ ಕುರಿತು ಅವರೊಡನೆ ನಾನು ಚರ್ಚೆ ನಡೆಸಿದೆ. ಚಿಪ್ಕೋ ಸಂದೇಶವನ್ನು ಜನರಿಗೆ ಮುಟ್ಟಿಸುವಲ್ಲಿ ಪಾದಯಾತ್ರೆಯ ಮಹತ್ವವನ್ನು ನಾನು ಅರಿತೆ. ಭೂತಾನದ ದೂರದ ಹಳ್ಳಿಗಾಡುಗಳಲ್ಲಿ ವಾಸಿಸುವ ರೈತರಿಂದ ನಾವು ಬಹಳಷ್ಟನ್ನು ಕಲಿತೆವು.

2.5 1983 ರ ಜನವರಿ ಮೊದಲನೇ ವಾರದಲ್ಲಿ ನಾನು ಬೆಂಗಳೂರನ್ನು ತಲುಪಿದೆ. ನನ್ನ ಮುಂದಿನ ಯೋಜನೆಯ ಕುರಿತು ನನ್ನ ವಿಚಾರ ಅಸ್ಪಷ್ಟವಾಗಿತ್ತು. ಆದರೂ ನನ್ನ ಕೆಲಸ ಅರಣ್ಯ ಮತ್ತು ಜನರ ಸಮಸ್ಯೆಗಳಿಗೆ ಸಂಬಂಧಿಸಿದ್ದೆಂದು ನನಗೆ ಗೊತ್ತಿತ್ತು. ಮೊದಲೆರಡು ತಿಂಗಳು ಬೆಂಗಳೂರಲ್ಲಿ ಪಶ್ಚಿಮ ಘಟ್ಟದ ಬಗ್ಗೆ ಕೆಲಸ ಮಾಡುವವರನ್ನು ಸಂಪರ್ಕಿಸುತ್ತ ಕಳೆದೆ, ಸಮಾನ ಮನೋಧರ್ಮದವರೊಡನೆ ಚರ್ಚಿಸುತ್ತಿದೆ. ಯಾವುದೇ ಸಂಸ್ಥೆಗಳ ನೆರವಿಲ್ಲದೆ ನನ್ನಷ್ಟಕ್ಕೆ ನಾನು ಕೆಲಸ ಮಾಡುವ ವಿಷಯವನ್ನು ಜನರಿಗೆ ತಿಳಿಸಿಹೇಳುವದು ಕಷ್ಟವಾಗಿತ್ತು. ಯಾವುದೇ ಆರ್ಥಿಕ ನೆರವಿಲ್ಲದ ನಾನು ಸ್ವತಂತ್ರ ಬರಹಗಾರನಾಗಿ ಹಣಗಳಿಸಬೇಕೆಂಬ ಯೋಜನೆ ಹಾಕಿಕೊಂಡಿದ್ದೆ. ನನ್ನ ಈ ಸಾಹಸದ (ದುಸ್ಸಾಹಸ) ಕುರಿತು ನನ್ನ ಗೆಳೆಯರು ಅನುಮಾನ ವ್ಯಕ್ತಪಡಿಸಿದರು. ನಾನು ಧೈರ್ಯಗುಂದದೆ ನೆಲದಲ್ಲಿ ನಿಂತು ಕೆಲಸ ಮಾಡುವ ಯೋಜನೆ ಹಾಕಿದೆ. ಕಾರವಾರದಿಂದ ಹೊರಟು ಕಾಳಿನದಿಯ ದಂಡೆಗುಂಟ ನಡೆಯುತ್ತ ಗೋವಾದಲ್ಲಿಯ ಕಾಳಿಯ ಉಗಮ ಸ್ಥಳವನ್ನು ತಲುಪುವ ಯೋಜನೆ ಹಾಕಿಕೊಂಡೆ.

## 3.00 <u>ಒಂದು ಪಾದಯಾತ್ರೆ</u>

3.1 ಕಾರವಾರ ಉತ್ತರ ಕನ್ನಡ ಜಿಲ್ಲಾ ಕೇಂದ್ರ. ಇದೊಂದು ಕರಾವಳಿ ಪಟ್ಟಣವಾಗಿದ್ದು ತನ್ನ ಸುಂದರವಾದ ಸಮುದ್ರ ತೀರಕ್ಕಾಗಿ ಪ್ರಸಿದ್ಧವಾಗಿದೆ. ಕಾರವಾರದಿಂದ 6 ಕಿ.ಮೀ ದೂರದ ಬಿಣಗಾದಲ್ಲಿ ಒಂದು ಕಾಸ್ಟಿಕ ಸೋಡಾ ಕಾರ್ಖಾನೆಯಿದೆ. ಅಲ್ಲಿಯ ಮೀನುಗಾರರನ್ನು ನಾನು ಭೇಟಿಯಾದೆ. ಇವರು ಕಾರ್ಖಾನೆಯಿಂದ ಹೊರಬೀಳುವ ಕೊಳಕಿನಿಂದ ತೊಂದರೆಗೀಡಾಗಿದ್ದರು. ಈ ಕಾರ್ಖಾನೆ 800 ಜನರಿಗೆ ಕೆಲಸ ಕೊಟ್ಟು 10,000 ಮೀನುಗಾರರನ್ನು ನಿರ್ಗತಿಕರನ್ನಾಗಿ ಮಾಡಿತ್ತು.

3.2 ನಾನು ಕಾರವಾರದಿಂದ ಕಾಳಿ ನದಿ ದಂಡೆಗುಂಟ ಪಾದಯಾತ್ರೆ ಪ್ರಾರಂಭಿಸಿದೆ. ಹಳ್ಳಿಗರೊಡನೆ ಮಾತಾಡಿದೆ. ಅವರೊಡನೆ ಉಳಿದೆ. ಕೊನೆಗೆ ಕಾಳಿನದಿಯ ಉಗಮ ಸ್ಥಳವಾದ ಡಿಗ್ಗಿ ಘಟ್ಟ ತಲುಪಿದೆ. ಈ ಪಾದಯಾತ್ರೆಯಿಂದ ನನಗೆ ಜಿಲ್ಲೆಯಲ್ಲಿ ನಡೆಯುತ್ತಿರುವ ಅಭಿವೃದ್ಧಿ ಕೆಲಸಗಳ ಮೇಲು ನೋಟ ಸಿಕ್ಕಿತು. ನೂರರಲ್ಲಿ ಎಂಭತ್ತರಷ್ಟು ಅರಣ್ಯದಿಂದ ತುಂಬಿರುವ ಉತ್ತರಕನ್ನಡ ಜಿಲ್ಲೆ ಹಿಂದುಳಿದ ಪ್ರದೇಶವೆಂದು ಪರಿಗಣಿಸಲ್ಪಟ್ಟಿತ್ತು. ಈ ಹಿಂದುಳಿಯುವಿಕೆಯನ್ನು ತೊಲಗಿಸಲು 3 'ಪಿ'ಗಳು ಬಂದುವು. ಮೊದಲನೆಯದು ಪ್ಲೈವುಡ ಕಾರ್ಖಾನೆ. ಇದು ಈ ಜಿಲ್ಲೆಯ ಅರಣ್ಯ ಸಂಪತ್ತನ್ನು ಲೂಟಿ ಮಾಡುವ ಇರಾದೆ ಹೊಂದಿತ್ತು. ಎರಡನೇ 'ಪಿ' ಎಂದರೆ ಪೇಪರ ಮಿಲ್, ಕಾಗದ ಕಾರ್ಖಾನೆ. ಇಲ್ಲಿನ ಬಿದಿರನ್ನು ಧ್ವಂಸಗೊಳಿಸಲು ವೆಸ್ಟಕೋಸ್ಟ ಪೇಪರ ಕಾರ್ಖಾನೆಯು ಸ್ಥಾಪನೆಯಾಯಿತು. ಮೂರನೇ 'ಪಿ' ಎಂದರೆ ಈಗಿತ್ತಲಾಗಿ ಬಂದ 'ಪವರ'. ಕಾಳೀನದಿಯ ನೀರಿನಿಂದ ವಿದ್ಯುತ್ತನ್ನು ಪಡೆಯಲು ಕಾಳೀನದಿಗೆ ಅಣೆಕಟ್ಟುಗಳನ್ನು ಕಟ್ಟಲಾಗುತ್ತಿದೆ. ನಾನು ಸುಪಾದಲ್ಲಿನ ಮುಖ್ಯ ಅಣೆಕಟ್ಟನ್ನು ನೋಡಿದೆ. ಈ ಅಣೆಕಟ್ಟಿನಿಂದ 47 ಹಳ್ಳಿಗಳು ಮುಳುಗಡೆಯಿಂದ ಸ್ಥಳಾಂತರಗೊಂಡಿವೆ. ಸುಮಾರು ಹತ್ತು ಸಾವಿರ ಎಕ್ರೆಗಳಷ್ಟು ಅರಣ್ಯವನ್ನು ಪೂರ್ಣವಾಗಿ ಕಡಿಯಲಾಗಿದೆ. ಸುಂದರವಾದ ಕಾಳೀನದಿ ಸತ್ತಿದೆ. ಕಾಗದ ಕಾರ್ಖಾನೆಯಿಂದ ಹೊರಬೀಳುವ ಕೊಳಕು ನೀರು ಜೀವಂತ ನದಿಯನ್ನು ಕೊಂದು ಹಾಕಿದೆ. ಈ ಮೇಲೆ ಹೇಳಿದ ಮೂರು 'ಪಿ'ಗಳು ಅನಾಗರಿಕತೆಯನ್ನು ತೊಲಗಿಸಲು ಬಂದು ಪ್ರಕೃತಿಯ ಸಮತೋಲನವನ್ನು ಕೆಡಿಸಿವೆ. 1950 ರಿಂದ 1980ರ ವರೆಗೆ ಇಲ್ಲಿಯ ಅರಣ್ಯ ಶೇಕಡಾ81 ರಿಂದ ಶೇಕಡಾ 25 ಕ್ಕೆ ಇಳಿದಿದೆ. ಕಾಗದ ಕಾರ್ಖಾನೆ ಮತ್ತು ಪ್ಲೈವುಡ ಕಾರ್ಖಾನೆಗಳು 40,000 ಜನರಿಗೆ ಕೆಲಸ ಕೊಟ್ಟು, 7 ಲಕ್ಷ ಜನರ ಜೀವನವನ್ನು [illegible] ಮೇಲೆ ಕೆಟ್ಟ ಪರಿಣಾಮವನ್ನುಂಟು ಮಾಡಿದೆ. ಸ್ಥೂಲಸ್ತರದಲ್ಲಿ ಇದು ಈ ದಕ್ಷಿಣ ತಪ್ಪಲಿನ ಮಳೆಯ ಗತಿಯ ಮೇಲೂ ದುಷ್ಪರಿಣಾಮ ಬೀರಿದೆ. ಅತ್ಯಂತ ಆಘಾತದ ಸಂಗತಿ ಕಾಳಿಯ ಉಗಮ ಸ್ಥಾನದಲ್ಲಿ ಡಿಗ್ಗಿ ಹಳ್ಳಿಯ ದಟ್ಟ ಅಡವಿಯಲ್ಲಿ ಹುಟ್ಟಿ ಹರಿಯುವ ಸಣ್ಣ ಹೊಳೆಗೆ ಸುತ್ತ ಮುತ್ತಲಿನ ಬಹಳಷ್ಟು ತೊರೆಗಳು ಬಂದು ಕೂಡಿ ಹಿಗ್ಗಿರುವ ಕಾಳಿ ನದಿ ಇಂದು ಬತ್ತಿಹೋಗುತ್ತಿದೆ. ಆ ಇಡೀ ಪ್ರದೇಶವು ಗಣಿಗಳಿಂದ ಹೊರಹಾಕಿದ ಹಾಳು ಮಣ್ಣಿನಿಂದ ತುಂಬಿಹೋಗಿದೆ. ಅಲ್ಲಿ ನಡೆದಿರುವ ಗಣಿಕೆಲಸಗಳ ಪರಿಣಾಮವಾಗಿ ತೊರೆ ಝರಿಗಳೆಲ್ಲ ಬತ್ತಿ ಹೋಗಿದೆ.

3.3 ಈ ಪಾದಯಾತ್ರೆ ಅಭಿವೃದ್ಧಿ ಕಾರ್ಯಕ್ರಮಗಳ ಆಳ ಮತ್ತು ಒಳಗುಟ್ಟು 'ಏನೆಂಬುದನ್ನು ಬಯಲು ಮಾಡಿತು. ಅರಣ್ಯ ಸಂಪತ್ತಿನ ಬಳಕೆ ಹೇಗಾಗಿದೆಯೆಂದರೆ ಇದು ಇಲ್ಲಿಯ ನಿವಾಸಿಗಳ ಜೀವನವನ್ನು ಅಪಾಯಕ್ಕೀಡು ಮಾಡಿದೆ. ದಿನ-ದಿನವೂ ಹೊಸತನ್ನು ಕೊಡಬಲ್ಲಂಥ ಅರಣ್ಯವನ್ನು ತಿರುಗಿ 'ಏನನ್ನೂ ಕೊಡಲಾರದಂಥ ವಸ್ತುವನ್ನಾಗಿ ರೂಪಾಂತರಿಸಲಾಗಿದೆ. ಇದು ಬಹುಜನರ ಜೀವನ ಗತಿಯ ಮೇಲೆ ಬೀರುವ ಪರಿಣಾಮ ಗಂಭೀರವಾದದ್ದು. ಮ್ಯಾಂಗನೀಜ ಗಣಿಯಿಂದ ವಿದೇಶೀ ವಿನಿಮಯ ಮತ್ತು ಅಣೆಕಟ್ಟಿನಿಂದ ವಿದ್ಯುತ್ತು ದೊರೆತರೂ ಈ ಪ್ರಕ್ರಿಯದಲ್ಲಿ ಬಹುಜನರು ತಮ್ಮ ಭೂಮಿಯ ಮೇಲಿನ ಹಕ್ಕನ್ನು ಕಳೆದುಕೊಂಡು ಅನಾಥರಾಗಿದ್ದಾರೆ. ಬಹುಜನರ ಈ ದುಸ್ಥಿತಿಯನ್ನು ನೋಡಿ ಪರಿಸರಕ್ಕಾಗಿ ಕೆಲಸ ಮಾಡುವ ನನ್ನ ನಿರ್ಧಾರ ಇನ್ನಷ್ಟು ಗಟ್ಟಿಯಾಯಿತು.

3.4 ಉತ್ತರ ಕನ್ನಡದ ಸಿರ್ಸಿ ತಾಲೂಕಿನ ನನ್ನ ಹಳ್ಳಿಗೆ ನಾನು ಹಿಂದಿರುಗಿದೆ. ನನ್ನೊಳಗಿನ ತುಮುಲ ಅಸಹನೀಯವಾಗಿತ್ತು. ನನ್ನ ಅನುಭವ ಮತ್ತು ಗೊಂದಲಗಳು ನನ್ನನ್ನು 'ಏನಾದರೂ ಮಾಡುವಂತೆ ಪ್ರೇರಿಸುತ್ತಿತ್ತು. ಆದರೆ ನಾನು ಹಣ ಮತ್ತು ವಿಚಾರ ಎರಡೂ ಇಲ್ಲದ ದಿವಾಳಿಖೋರನಾಗಿದ್ದೆ.

...4

ಇದೇ ಸಮಯಕ್ಕೆ ಸುಂದರಲಾಲ ಬಹುಗುಣರು ಸಿರಸಿಗೆ ಬಂದರು, ಜಾಗೀಗದ್ದೆ ಗಲಗದ್ದೆ ಯುವಕ ಯುವತಿ ಮಂಡಳಗಳು ಬಹುಗುಣರನ್ನು ತಮ್ಮ ಹಳ್ಳಿಗಳಿಗೆ ಕರೆದರು. ಅವರು ಕಡಿಯಲು ಗುರುತು ಹಾಕಿದ ಮರಗಳನ್ನು ರಕ್ಷಿಸಬೇಕೆಂಬ ವಿಚಾರದಲ್ಲಿದ್ದರು. ಈ ಹಳ್ಳಿಗಳ ಜನರು ಚಿಪ್ಕೋ ಮಾದರಿಯಲ್ಲಿ ಕಳವಳಿ ಮಾಡುವ ವಿಷಯ ನಮಗೆ ಗೊತ್ತಿಲ್ಲವಾಗಿತ್ತು. ಕರ್ನಾಟಕದ ತುಂಬೆಲ್ಲ ಈ ಪ್ರಶ್ನೆ ಹರಡಬಹುದೆಂಬುದನ್ನು ನಾವು ಎಣಿಸಿರಲಿಲ್ಲ.

## 4.00 ದಕ್ಷಿಣ ಭಾರತದಲ್ಲಿ ಅಪ್ಪಿಕೋ ಆಂದೋಲನ

4.1 1983ರ ಸೆಪ್ಟೆಂಬರ 8ರಂದು ಉತ್ತರ ಕನ್ನಡದ ಸಿರ್ಸಿ ತಾಲೂಕಿನ ಸಾಲ್ಕಣಿ ಸಮೀಪದ ಕಳಾಸೆ ಎಂಬಲ್ಲಿ ಯುವಕ-ಯುವತಿ ಯರೆಲ್ಲ ಸೇರಿ ಅಪ್ಪಿಕೋ ಆಂದೋಲನ ಪ್ರಾರಂಭಿಸಿದರು. ಯಾವುದೇ ಮುಂದಾಳುವಿರದ, ಘೋಷಣೆಯಿಲ್ಲದ ಆಂದೋಲನವಾಗಿತ್ತು. ಇದು ಜನ ಅಡವಿಗೆ ಹೋಗಿ ಕಡಿಯಬೇಕೆಂದಿರುವ ಮರಗಳನ್ನು ಅಪ್ಪಿಕೊಂಡರು. ನನಗಿದು ಗೊತ್ತಾಗಿದ್ದು ಕೆಲದಿನಗಳ ನಂತರ ಪತ್ರಿಕೆಗಳ ಮೂಲಕ. ಅನಂತರ ನಾನು ಕಳಾಸೆ ಅಡವಿಗೆ ಹೋದೆ. ಹಳ್ಳಿಗಳನ್ನು ತಿರುಗಿದೆ. ಸ್ಥಳೀಕ ರಾಜಕಾರಣದ ಪರಿಚಯವಿರುವ ನಾನು ಅಪ್ಪಿಕೋವನ್ನು ರಾಜಕಾರಣಿಗಳು ತಮ್ಮ ಲಾಭಕ್ಕಾಗಿ ಬಳಸುವರೆಂಬುದನ್ನು ಗ್ರಹಿಸಿದೆ. ಇಂತಹ ಸನ್ನಿವೇಶದಲ್ಲಿ ನನ್ನ ಪ್ರವೇಶವಾಗಿ ಅಪ್ಪಿಕೋಕ್ಕೆ ರಚನಾತ್ಮಕ ಸ್ವರೂಪ ನೀಡಲು, ಮಾರ್ಗದರ್ಶನ ನೀಡಲಾಗಿದೆ. 1983ರ ಡಿಸೆಂಬರದ ಹೊತ್ತಿಗೆ ಅಪ್ಪಿಕೋ ಸಿರಸಿ ಸಿದ್ದಾಪುರಗಳ ಪ್ರದೇಶಗಳಲ್ಲಿ ಹಬ್ಬಿತು. 1984 ರಲ್ಲಿ ಶಿವಮೊಗ್ಗಾ ಜಿಲ್ಲೆಯ ಸಾಗರದಲ್ಲಿಯೂ ಅಪ್ಪಿಕೋ ಆರಂಭವಾಯಿತು. 1985 ರ ಸಮಯಕ್ಕೆ ಅಪ್ಪಿಕೋ ಉತ್ತರ ಕನ್ನಡ ಶಿವಮೊಗ್ಗಾ ಮತ್ತು ದಕ್ಷಿಣ ಕನ್ನಡಗಳಲ್ಲಿ ಆಳವಾಗಿ ಬೇರು ಬಿಟ್ಟಿತ್ತು.

4.2 ಈ ಆಂದೋಲನವನ್ನು ಹಬ್ಬಲು ಮುಖ್ಯ ಕಾರಣವೆಂದರೆ ಅರಣ್ಯ ನೀತಿ. ಅರಣ್ಯ ಆಧಾರಿತದ ಪ್ರಮುಖ ಉದ್ದೇಶ ಅರ್ಥಶಾಸ್ತ್ರಾಧಾರಿತ ಉದ್ದಿಮೆಗಳಿಗೆ ಕಚ್ಚಾವಸ್ತುಗಳನ್ನು ಒದಗಿಸಿ ಅದರಿಂದಾ ಗರಿಷ್ಠ ಪ್ರಮಾಣದ ಆದಾಯ ಪಡೆಯುವುದಾಗಿದೆ. ಇದಕ್ಕಾಗಿ ನಮ್ಮಲ್ಲಿಯ ಪ್ರಾಕೃತಿಕ ಕಾಡುಗಳನ್ನು ಸವರಿ ವ್ಯಾಪಾರಿ ವೃಕ್ಷಗಳಾದ ಸಾಗುವಾನಿ ಮತ್ತು ಸಾಕಷ್ಟು ಪ್ರಮಾಣದ ಹವಾಮಾನ ಬದಲಾವಣೆಗಳಾಗಿ ಮಳೆ ಬೆಳೆಗಳ ಮೇಲೆ ವಿಪರೀತ ಪರಿಣಾಮವುಂಟಾಗಿದೆ. ಸರಕಾರದ ಅರಣ್ಯ ನೀತಿ ನಮ್ಮ ಜನರ ಸಮಸ್ಯೆಗಳನ್ನು ಅಲಕ್ಷಿಸಿ ತಾನು ಹಿಡಿದಿರುವ ದಾರಿ ವೈಜ್ಞಾನಿಕವಾದದ್ದೆಂದು ಸಾರುತ್ತದೆ. ವೈಜ್ಞಾನಿಕವೆಂದು ಕರೆದುಕೊಳ್ಳುವ ಅರಣ್ಯೀಕರಣದಿಂದ ಪ್ರಾಕೃತಿಕ ಅಡವಿಗಳು ನಾಶವಾಗಿವೆ. ಮತ್ತು ನವೀಕರಣ ಶಕ್ತಿಯುಳ್ಳ ಪ್ರಕೃತಿಯನ್ನು ನವೀಕರಿಸಲಾಗದ ವಸ್ತುವನ್ನಾಗಿ ಪರಿವರ್ತಿಸಲಾಗಿದೆ. ಈ ಅರಣ್ಯ ಸಂಪತ್ತಿನ ಆಧಾರದ ಮೇಲೆ ಬದುಕುವ ಜನರನ್ನು ಚೋರರನ್ನಾಗಿ ಮಾಡಲಾಗಿದೆ. ಇಂಥ ಅರಣ್ಯ ನೀತಿಯ ಬಗ್ಗೆ ಜನರಲ್ಲಿ ಬಹು ದಿನಗಳಿಂದ ಜುಗುಪ್ಸೆ ಬೆಳೆಯತೊಡಗಿತ್ತು. ಮಲೆನಾಡಿನ ಹಳ್ಳಿಗಳ ಜನರಲ್ಲಿ ಈ ಭಾವನೆ ಅರೆ ಪ್ರಜ್ಞಾವಸ್ಥೆಯಲ್ಲಿತ್ತು. ಈ ಎಲ್ಲ ಭಾವನೆಗಳನ್ನು ಮತ್ತು ಕಷ್ಟಗಳನ್ನು ಜನ ಅಪ್ಪಿಕೋದ ಮೂಲಕ ವ್ಯಕ್ತ ಪಡಿಸಿದರು.

## 4.3 ಅಪ್ಪಿಕೋವನ್ನು ಹತ್ತಿಕ್ಕಲು.

ವೈಜ್ಞಾನಿಕವೆಂದು ಕರೆದುಕೊಳ್ಳಲಾಗುವ ಅರಣ್ಯೀಕರಣವನ್ನು ಜನಸಾಮಾನ್ಯರು ಪ್ರತಿಭಟಿಸುವ ಪಣ ತೊಟ್ಟರು. ಮೇಲ್ವರ್ಗದ ಅಧಿಕಾರಿಗಳಿಗೆ ಇದೊಂದು ಬೆದರಿಕೆಯಾಗಿತ್ತು. ಈ ಜನಾಂದೋಲನವನ್ನು ಹತ್ತಿಕ್ಕಲು ಉನ್ನತ ಅರಣ್ಯಾಧಿಕಾರಿಗಳು ಅಪ್ಪಿಕೋವನ್ನು ಅವೈಜ್ಞಾನಿಕವೆಂದು ಘೋಷಿಸಿದರು.

ಎರಡನೆಯ ಆರೋಪವೆಂದರೆ, ಈ ಆಂದೋಲನ ಅಭಿವೃದ್ಧಿಯ ವಿರೋಧಿಯೆಂದು. ಈ ಚಳವಳಿ ರಾಜಕೀಯ ಉದ್ದೇಶದಿಂದ ಕೂಡಿದೆಯೆಂದು ಹೇಳುತ್ತ, ಅವರು ಜನರ ಧ್ವನಿಯನ್ನು ಅಡಗಿಸಲು ಪ್ರಯತ್ನಿಸಿದರು. ಈ ಎಲ್ಲ ಪ್ರಯತ್ನಗಳಿಂದ ಅಪ್ಪಿಕೋ ಮತ್ತಷ್ಟು ಗಟ್ಟಿಯಾಯಿತಲ್ಲದೆ ಇನ್ನಷ್ಟು ಅನೇಕ ಅರಣ್ಯ ಕ್ಷೇತ್ರಗಳಿಗೆ ಹಬ್ಬಿತು. ಈ ಜನಾಂದೋಲನದ ವಿರುದ್ಧ ಬರೆಯಲು ಅರಣ್ಯ ಇಲಾಖೆ ಒಬ್ಬ ಪ್ರಸಿದ್ಧ ಪರಿಸರ ತಜ್ಞನನ್ನು ಬಳಸಿಕೊಂಡಿತು. ಜನರೇ ನೇರವಾಗಿ ಅರಣ್ಯ ರಕ್ಷಣೆಗೆ ಮುಂದೆ ಬಂದಿದ್ದು ಬಹುಶಃ ಈ ಪರಿಸರ ತಜ್ಞರಿಗೆ ರುಚಿಸಲಾರದು.

## 4.4 ರಚನಾತ್ಮಕ ದೃಷ್ಟಿ

ಜನವಿರೋಧಿ ಅರಣ್ಯ ನೀತಿಯನ್ನು ವಿರೋಧಿಸಲು ಜನರೇ ಸ್ವಂತ ಪ್ರೇರಣೆಯಿಂದ ಅಪ್ಪಿಕೋ ಆರಂಭಿಸಿದರು. ಅಪ್ಪಿಕೋ ಮೂಲತಃ ನಡೆದಿದ್ದ ಅರಣ್ಯ ನಾಶವನ್ನು ತಡೆಯಲು. ಈ ನಕಾರಾತ್ಮಕ ಸ್ವರೂಪವನ್ನು ಹೋಗಲಾಡಿಸಲು ಅಪ್ಪಿಕೋ, ಜನಪ್ರಜ್ಞೆ ಬೆಳೆಸುವ ಮತ್ತು ಅರಣ್ಯ ಸಂಪತ್ತನ್ನು ಮಿತವಾಗಿ ಬಳಸುವ ಕಾರ್ಯಕ್ರಮಗಳನ್ನು ಹಾಕಿಕೊಂಡಿತು. ಹಳ್ಳಿಯ ಯುವಕರು ಬೀಜ ಸಂಗ್ರಹಣಾ ಕಾರ್ಯ ಆರಂಭಿಸಿ ತಾವೇ ನರ್ಸರಿ ಮಾಡತೊಡಗಿದರು. ಬೋಳು ಗುಡ್ಡೆಗಳ ಮೇಲೆ ಗಿಡಗಳನ್ನು ನೆಟ್ಟರು. ಇಷ್ಟೇ ಅಲ್ಲದೆ ಅರಣ್ಯದ ಮೇಲೆ ಜನರ ಅವಲಂಬನವನ್ನು ಕಡಿಮೆ ಮಾಡಲು ಅಪ್ಪಿಕೋ ಕಾರ್ಯಕರ್ತರು ಅಸ್ತ್ರ ಒಲೆ ಹಾಕಲಾರಂಭಿಸಿದರು. ಸಗಣಿ ಅನಿಲ ಹಳ್ಳಿಹಳ್ಳಿಗಳಲ್ಲಿ ಬಳಸುವ ಕುರಿತು ಜನರಿಗೆ ತಿಳಿಹೇಳಿದರು. ಹಳ್ಳಿ-ಹಳ್ಳಿಗಳಲ್ಲಿ ಜನಸಂಪರ್ಕ ಸಭೆ ಶಿಬಿರಗಳನ್ನು 'ಏರ್ಪಡಿಸಿ ಅರಣ್ಯವನ್ನು ಉಳಿಸುವ, ಬೆಳೆಸುವ ಮತ್ತು ಬಳಸುವ ಕುರಿತು ಚರ್ಚಿಸಿದರು. ಇಂಥ ರಚನಾತ್ಮಕ ಕಾರ್ಯಕ್ರಮಗಳೇ ಅಪ್ಪಿಕೋ ಗಟ್ಟಿಯಾಗಿ ಉಳಿಯಲು ಕಾರಣ. ಅರಣ್ಯ ಮತ್ತು ಅಭಿವೃದ್ಧಿಯ ಕುರಿತು ಜನರ ದೃಷ್ಟಿಯನ್ನು ಬದಲಾಯಿಸಲು ಇವೆಲ್ಲ ಶಾಶ್ವತ ಕಾರ್ಯಕ್ರಮಗಳಾದವು. ಅಪ್ಪಿಕೋದ ಮುಖ್ಯ ಉದ್ದೇಶ ಪ್ರಕೃತಿ ಮತ್ತು ಮನುಷ್ಯನ ಮಧ್ಯೆ ಸಾಮರಸ್ಯವನ್ನು ತಂದು ಅಭಿವೃದ್ಧಿ ಸಾಧಿಸುವುದು.

## 4.5 ಈ ಜನಾಂದೋಲನ ಸಾಧಿಸಿದ್ದೇನು ?

4.51 ರಾಜ್ಯದ ತುಂಬೆಲ್ಲ ಮತ್ತು ಜನಸಾಮಾನ್ಯರಲ್ಲಿ ಪ್ರಜ್ಞೆ ಹುಟ್ಟಲು ಕಾರಣ ಅಪ್ಪಿಕೋ ಆಂದೋಲನ ಎಂಬುದು ಸ್ಪಷ್ಟ. ಜನರ ಹೃದಯವನ್ನು ತಲುಪುವಲ್ಲಿ ಅಪ್ಪಿಕೋ ಸಾಕಷ್ಟು ಯಶಸ್ಸುಗಳಿಸಿದೆ. ಈ ಪ್ರಜ್ಞೆ ಹಳ್ಳಿಯ ಚಿಕ್ಕ ಮಕ್ಕಳು ಮತ್ತು ಇತರರಲ್ಲಿ ಗೀತೆಗಳನ್ನು ಮತ್ತು ಜಾನಪದ ಪದ್ಯಗಳನ್ನು ಬರೆಯಲು ಪ್ರೇರಣೆ ನೀಡಿತು. ಅಪ್ಪಿಕೋವನ್ನು ವಸ್ತುವನ್ನಾಗಿ ಮಾಡಿಕೊಂಡು ನಾಟಕಗಳು ಬರೆಯಲ್ಪಟ್ಟವು. ಅಪ್ಪಿಕೋ ಸಂದೇಶವನ್ನು ಪ್ರಚುರಪಡಿಸಲು ಯಕ್ಷಗಾನವನ್ನು ಬಳಸಿಕೊಳ್ಳಲಾಯಿತು. ಯಕ್ಷಗಾನದ ಮಟ್ಟಿನಲ್ಲಿ ಅಪ್ಪಿಕೋ ಪದ್ಯಗಳು ರಚಿಸಲ್ಪಟ್ಟವು. ಮೊತ್ತ ಮೊದಲ ಬಾರಿಗೆ ಹಳ್ಳಿಗರು ಪ್ರಕೃತಿಯ ಪ್ರಾಮುಖ್ಯತೆಯನ್ನು ಚಿತ್ರಿಸುವ ಬೀದಿ ನಾಟಕಗಳನ್ನು ನೋಡಿದರು. ಸ್ವಲ್ಪದರಲ್ಲಿ ಹೇಳುವದಾದರೆ ಕರ್ನಾಟಕದಲ್ಲಿ ಪರಿಸರ ಪ್ರಜ್ಞೆ ಬೆಳೆಯಲು ಅಪ್ಪಿಕೋ ಪ್ರೇರಣೆ ನೀಡಿತು.

4.52 ಸದ್ಯದ ಜನಾಂದೋಲನದಲ್ಲಿ ಮತ್ತು ಚಳವಳಿಯಲ್ಲಿ ಜನ ತಮ್ಮ ಹಕ್ಕುಗಳಿಗೆ ಒತ್ತು ಕೊಡುತ್ತಾರೆ. ಸಾಮಾನ್ಯವಾಗಿ ಯಾವುದೇ ಚಳವಳಿಯೂ ತನ್ನ ಕರ್ತವ್ಯಗಳ ಕುರಿತು ಅಂತರಂಗ ವಿಶ್ಲೇಷಣೆಗೆ ತೊಡಗುವದಿಲ್ಲ. ಹಕ್ಕುಗಳಿಗಾಗಿ ಹೋರಾಡುವಾಗ ತಮ್ಮ ಕರ್ತವ್ಯಗಳ ಕುರಿತೂ

ಯೋಚಿಸಬೇಕು. ಜನರ ಕರ್ತವ್ಯಗಳ ಕುರಿತೂ ಅಪ್ಪಿಕೋ ಒತ್ತಿಹೇಳುತ್ತಿದೆ. ಏರುತ್ತಿರುವ ಜನಸಂಖ್ಯೆ ಮತ್ತು ಜನರ ತಪ್ಪು ರೂಢಿಗಳಾದ ಬೆಟ್ಟ-ಬೇಣಗಳನ್ನು ಸುಡುವುದು, ಮಳೆಗಾಲದಲ್ಲಿ ಸೊಪ್ಪು ಕಡಿಯುವುದು ಮುಂತಾದ ಕಾರ್ಯಗಳಿಂದಗಿ ಅರಣ್ಯ ನಾಶದಲ್ಲಿ ಜನರ ಪಾತ್ರವೂ ಇಲ್ಲದಿಲ್ಲ. ಜನರಿಂದಾಗುವ ಇಂಥ ತಪ್ಪುಗಳ ಬಗ್ಗೆ ಅಪ್ಪಿಕೋ ಜನರಿಗೆ ತಿಳಿಸಿ ಹೇಳಿದೆ, ಹೇಳುತ್ತಿದೆ. ಮರಗಳನ್ನು ಕಡಿಯಬಾರದೆಂದು ಸರಕಾರಕ್ಕೆ ಒತ್ತಾಯ ತರುವ ಜನ ಮೊದಲು ತಾವು ಹಸಿಮರಗಳನ್ನು ಕಡಿಯುವುದನ್ನು ನಿಲ್ಲಿಸಬೇಕೆಂದು ಅಪ್ಪಿಕೋ ಜನರನ್ನು ಕೇಳಿಕೊಂಡಿದೆ. ನಾವು ಏನನ್ನು ಕೇಳುತ್ತಿರುವೆವೋ ಅದನ್ನು ನಾವು ಮೊದಲು ಮಾಡಿ ತೋರಿಸಬೇಕು. ಇಲ್ಲಿ ಬೇಕಾಗಿರುವುದು ಹೃದಯ ಬದಲಾವಣೆ, ಪ್ರಕೃತಿಯೊಂದಿಗೆ ಸಾಮರಸ್ಯ ಸಾಧಿಸುವುದು.

4.53 ಆದರೆ ಈ ಆಂದೋಲನದಿಂದ ಅರಣ್ಯ ನೀತಿಯಲ್ಲಿ ಬದಲಾವಣೆಯಾಗಲಿಲ್ಲ. ಈ ಶಾಂತಿಯುತ ಹೋರಾಟದಿಂದ ಪಶ್ಚಿಮ ಘಟ್ಟದಲ್ಲಿನ ಅರಣ್ಯದಲ್ಲಿ ಹಸಿರು ಮರಗಳನ್ನು ಕಡಿಯಬಾರದೆಂದು ನಮ್ಮ ಬೇಡಿಕೆಯಾಗಿತ್ತು. ಹಸಿರು ಮರಗಳನ್ನು ಕಡಿಯುವುದು ಬಂದಾಗಿದ್ದು ಸಿರ್ಸಿ ಅರಣ್ಯ ವಿಭಾಗದಲ್ಲಿ ಮಾತ್ರ. ಇದರಿಂದ ನಾವು ಸಾಧಿಸಿರುವ ಯಶಸ್ಸು ಸಣ್ಣದು. ಮರಗಳನ್ನು ಸಂಪೂರ್ಣ ಕಡಿದು ಹಾಕಿ ಅಲ್ಲಿ ಒಂದೇ ಜಾತಿಯ ಗಿಡಗಳನ್ನು ನೆಡುವ ಕಾರ್ಯ ಹಾಗೆಯೇ ಮುಂದುವರಿದಿದೆ. ನಾವು ಸಾಧಿಸಿರುವುದು ತೀರಾ ಅತ್ಯಲ್ಪ. ಆಮ್ಲಜನಕವನ್ನು ಕಾಯ್ದು, ಉರುವಲು ಮತ್ತು ಕೃಷಿಗಾಗಿ ಮಣ್ಣನ್ನು ತಯಾರಿಸುವ ಕಾರ್ಖಾನೆಯೆಂದು ತಿಳಿದು ವರ್ತಿಸಬೇಕೆಂಬ ನಮ್ಮ ಬೇಡಿಕೆ ಅಲಕ್ಷಿಸಲ್ಪಟ್ಟಿದೆ. ~~ಸರಕಾರ~~ ಅರಣ್ಯವನ್ನು ಉದ್ದಿಮೆಗಳಿಗೆ ಬೇಕಾಗುವ ಕಚ್ಚಾ ವಸ್ತುಗಳನ್ನು ಒದಗಿಸುವುದು, ಪಟ್ಟಣಗಳಿಗೆ ಕಟ್ಟಿಗೆ ಪೂರೈಸುವ ಉಗ್ರಾಣವೆಂಬುದಾಗಿ ಸರಕಾರ ತಿಳಿದ ಹಾಗಿದೆ.

## 5.0 <u>ಪರಿಸರ ದೃಶ್ಯ</u>

5.1 ಕೇಂದ್ರ ಹಾಗೂ ಕೆಲವು ರಾಜ್ಯಗಳಲ್ಲಿ ಪರಿಸರ ಇಲಾಖೆಯೆಂಬುದೊಂದಿದೆ. ಈ ಇಲಾಖೆಗಳು ಸರಕಾರೀ ಅಧಿಕಾರಿಗಳ ಕೈಗೊಂಬೆಗಳಾಗಿದ್ದು ಚೈತನ್ಯಶೂನ್ಯವಾಗಿವೆ. ಇವುಗಳ ಬಳಿ ಇರುವ ನಿಧಿಯ ಹೆಚ್ಚಿನ ಭಾಗ ಆಡಳಿತಕ್ಕೆ ಮತ್ತು ಸಂಶೋಧನೆಗೆ ಖರ್ಚಾಗುತ್ತಿದೆ. ಈ ಇಲಾಖೆಗಳು ಜನರ ಆಂದೋಲನಕ್ಕೆ ಯಾವುದೇ ಸಹಾಯ ಮಾಡುವುದಿಲ್ಲ. ಮಟ್ಟಿನ ಹಕ್ಕಳ ಹಂತದಲ್ಲಿ ನಡೆಯುವ ಪರಿಸರ ರಕ್ಷಣೆಯ ಚಳವಳಿಯಿಂದ ಪ್ರೇರಣೆ ಪಡೆಯುವುದರ ಬದಲು, ಇವು ಇಂಥ ಚಳವಳಿಗಳನ್ನು ಉಪೇಕ್ಷಿಸುತ್ತವೆ. ಈ ಇಲಾಖೆಗಳ ಪರಿಸರ ನೀತಿ ಸಹ ವಾಸ್ತವಕ್ಕೆ ದೂರವಾಗಿದೆ. ತಮ್ಮದೇ ಆದ ದಂತ ಗೋಪುರದಲ್ಲಿ ಕುಳಿತು ಜನರ ಭವಿಷ್ಯವನ್ನು ನಿರ್ಧರಿಸುವ ಜನ ಇವರು.

5.2 ಪರಿಸರದ ಬಗ್ಗೆ ಕೆಲಸ ಮಾಡುವ ಎರಡನೆಯ ಗುಂಪೆಂದರೆ ಸರಕಾರೇತರ ಸಂಸ್ಥೆಗಳು. ಇತ್ತಿತ್ತಲಾಗಿ ಈ ಸರಕಾರೇತರ ಪರಿಸರ ಸಂಸ್ಥೆಗಳು ದೊಡ್ಡ ದೊಡ್ಡ ಪಟ್ಟಣಗಳಲ್ಲಿ ಹೆಚ್ಚು ಹುಟ್ಟಿವೆ. ಈ ಸಂಸ್ಥೆಗಳ ಪ್ರಮುಖ ಲಕ್ಷಣಗಳೆಂದರೆ ಇವು ಪಟ್ಟಣಗಳಲ್ಲಿ ತಳವೂರಿದಂಥವು, ಪಟ್ಟಣದ ಮಧ್ಯಮ ಮೇಲು ವರ್ಗದ ಜನರಿಂದ ಪ್ರಾರಂಭಿಸಲ್ಪಟ್ಟು ಅವರಿಂದಲೇ ನಡೆಸಲ್ಪಡುವಂಥವು. ಈ ಜನ ದೊಡ್ಡ ದೊಡ್ಡ ಶಬ್ದಗಳನ್ನು ಬಳಸಿ ವಿದ್ವಾಂಸರು ಮರುಳಾಗುವಂತೆ ಒಳ್ಳೊಳ್ಳೆ ವರದಿಗಳನ್ನು ಬರೆಯುತ್ತಾರೆ. ಬಹುತೇಕ ಸಂಸ್ಥೆಗಳು ವಿದೇಶೀ ಸಂಸ್ಥೆಗಳಿಂದ ಹಣ ಪಡೆಯುತ್ತವೆ. ಇವು ತಯಾರಿಸುವ ಸಂಶೋಧನಾ ಬರಹಗಳು ಜನಸಾಮಾನ್ಯರ ಪರಿಸರ ಆಂದೋಲನದ ಅಂತ್ಯಕ್ರಿಯೆ ಮಾಡುತ್ತವೆ. ಬಹಳಷ್ಟು ಸಂಸ್ಥೆಗಳು ಬದುಕಲು ಹೋರಾಡುವ ಪರಿಸರ ಆಂದೋಲನದ ಮೇಲೆ ಜೀವಿಸುತ್ತಾರೆ. ಈ ಸಂಸ್ಥೆಗಳಿಗೆ ಹಳ್ಳಿಗಳ ಪರಿಚಯ

ಕಡಿಮೆ. ಸಮಾಜದಲ್ಲಿಯ ವ್ಯಾಪಾರೀ ಧೋರಣೆ ಪರಿಸರದ ಸನ್ನಿವೇಶವನ್ನು ಆಕರ್ಷಿಸಿದೆ. ಭಾರತದಲ್ಲಿ ಈ ಗುಂಪಿನ ಬಹಳಷ್ಟು ಪರಿಸರ ಸಂಸ್ಥೆಗಳು ಜನಸಾಮಾನ್ಯರ ಚಳವಳಿಯ ಮುಖವಾಣಿಗಳ ಪಾತ್ರ ವಹಿಸಿವೆ. ಬಹಳಷ್ಟು ಸಲ ಇವು ಜನಾಂದೋಲನವನ್ನು ತಮ್ಮ ಹಿಡಿತಕ್ಕೆ ತೆಗೆದುಕೊಂಡು ಈ ಆಂದೋಲನದ ಬೆಳವಣಿಗೆ ಮುನ್ನೇ ಹಾಳು ಮಾಡಿದ್ದುಂಟು. ಸರಕಾರೇತರ ಪರಿಸರ ಸಂಸ್ಥೆಗಳ ಕುರಿತು ಸಾಮಾನ್ಯವಾಗಿ ನನ್ನ ಅನುಭವ ಇದು. ಇದಕ್ಕೆ ಅಪವಾದಗಳಿರಬಹುದು. ಜನರ ಆಂದೋಲನದ ಬೆಳವಣಿಗೆಯನ್ನು ಕೆಡಿಸದೆ ಅದಕ್ಕೆ ಸಹಾಯ ಮಾಡುವ ಸಂಸ್ಥೆಗಳೂ ಇವೆ.

5.3 ಈ ವೇಳೆಯ ಪರಿಸರ ಸ್ವರೂಪಕ್ಕೆ ವಿರುದ್ಧವಾಗಿರುವುದು ಜನರ ಪರಿಸರ ದೃಷ್ಟಿ. ಜೀವನಕ್ಕಾಗಿ ಹೋರಾಡುವ ಜನ ಅರಣ್ಯ ನಾಶದ [illegible], ನದಿ-ಸಮುದ್ರಗಳ ನೀರು ಕೆಡುವ ವಿಚಾರದಲ್ಲಿ, ತಳೆಯುವ ಪರಿಸರ ದೃಷ್ಟಿಯೇ ಬೇರೆ. ಈ ಚಳವಳಿಗಳಲ್ಲಿ ಭಾಗವಹಿಸಿದ ಜನ, ಜೀವನದಲ್ಲಿ ಕಷ್ಟಗಳನ್ನುಂಡವರು. ಇವರೆಲ್ಲ ಹೋರಾಡುವುದು ಅಭಿವೃದ್ಧಿಯ ಹೆಸರಿನಲ್ಲಿ ನಡೆಯುವ ಕಾರ್ಯಕ್ರಮಗಳ ವಿರುದ್ಧವಾಗಿ ಇವರದು ಸಮಗ್ರ ದೃಷ್ಟಿ. ಜೀವನದ ಒಳಸಂಬಂಧಗಳ ಅರಿವುಳ್ಳ ಇವರು ಅಭಿವೃದ್ಧಿಯ ಸ್ವರೂಪದಲ್ಲಿಯ ಬದಲಾವಣೆಗಾಗಿ ಹೋರಾಡುತ್ತಾರೆ. ಪ್ರಕೃತಿಯ ಸಮತೋಲನವನ್ನು ಹಾಳು ಮಾಡದ ಅಭಿವೃದ್ಧಿಯನ್ನು ಬಯಸುತ್ತಾರೆ. ಹೆಚ್ಚಿನ ಸಂದರ್ಭಗಳಲ್ಲಿ ಜನರೇ ಈ ದೃಷ್ಟಿ ನಿರಾಕರಿಸಲ್ಪಡುತ್ತದೆ. ಇವರನ್ನು ಪ್ರತಿಗಾಮಿಗಳೆಂದು ಕರೆಯಲಾಗುತ್ತದೆ.

5.4 ಮೊದಲು ಹೇಳಿದ ಎರಡು ಪರಿಸರ ಗುಂಪುಗಳ ಸಮನ್ವಯವನ್ನು ಬಯಸುವ ಈಗ ಹೊಸದೊಂದು ಘೋಷಣೆಯನ್ನು ಸೃಷ್ಟಿಸಿವೆ. ಇದರ ಕೊಟ್ಟ ಹೆಸರೆಂದು ಉತ್ತರವೆಂದರೆ ಪರಿಸರ ಅಭಿವೃದ್ಧಿ. ಪರಿಸರವನ್ನು ಅಭಿವೃದ್ಧಿ ಪಡಿಸಬಹುದಾದ ವಸ್ತುವೆಂದು ಭಾವಿಸಿ, ಪರಿಸರ ಸಮತೋಲನವನ್ನು ಒಂದು ಪ್ರತ್ಯೇಕ ಅಸ್ತಿತ್ವವೆಂದು ಪರಿಗಣಿಸಲಾಗಿದೆ. ಈ ತರದ ಪರಿಸರ ಅಭಿವೃದ್ಧಿ ಕಲ್ಪನೆ, ಜೀವನದ ಪ್ರತಿಯೊಂದು ಮುಖವನ್ನೂ ಒಳಗೊಳ್ಳುವ ವಿಶಾಲ ಸ್ವರೂಪದ ಕಲ್ಪನೆಯನ್ನು ಅಲ್ಲಗಳೆಯುತ್ತದೆ. ಇದೊಂದು ಅವಸರದ ಕಲ್ಪನೆ. ಇದು ಪರಿಸರದಲ್ಲಿರುವ ಜೀವಿಗಳ ಪರಸ್ಪರ ಸಂಬಂಧಗಳನ್ನು ಅಲ್ಲಗಳೆಯುತ್ತದೆ. ಈ ಪರಿಸರ ಅಭಿವೃದ್ಧಿಯ ಜನ ಅಭಿವೃದ್ಧಿಯ ಹೆಸರಿನಲ್ಲಿ ನಡೆಯುವ, ತನ್ಮೂಲಕ ಜೀವದ ಬಡವರ್ಗದ ಜನರನ್ನು ಗೋಳಿಗೀಡು ಮಾಡುವ ಕಾರ್ಯಕ್ರಮಗಳನ್ನು ಪ್ರಶ್ನಿಸುವದಿಲ್ಲ. ದೌರ್ಭಾಗ್ಯದಿಂದ ಪರಿಸರದ ಬಗೆಗಿನ ಈ ಒಮ್ಮುಖ ದೃಷ್ಟಿಯಿಂದಲೇ ನಿರ್ಣಯ ತೆಗೆದುಕೊಳ್ಳುವ ಜನರ ಮನ್ನಣೆ ಜನಪ್ರಿಯತೆ ಗಳಿಸುತ್ತದೆ.

6.00 ವೈಯಕ್ತಿಕ ವಿಚಾರಗಳು.

6.1 ಈ ನನ್ನದು ಜನರನ್ನು ಸಂಘಟಿಸುವ, ಅಪ್ಪಿಕೋ ವಿಚಾರಧಾರೆಗಳನ್ನು ಪ್ರಚುರಪಡಿಸುವ, ಜನರು ಕ್ರಿಯಾಶೀಲರಾಗುವಂತೆ ಮಾಡುವ ಪಾತ್ರ. ಅಪ್ಪಿಕೋವನ್ನು ಬಲವಾದ ಅಂಗಸಂಸ್ಥೆಗಳುಳ್ಳ ಒಂದು ಕೇಂದ್ರ ಸಂಸ್ಥೆಯನ್ನಾಗಿ ಕಟ್ಟುವದಲ್ಲಿ ನನಗೆ ನಂಬಿಗೆಯಿಲ್ಲ. ನನ್ನ ಕೆಲಸವೆಂದರೆ ಜನರನ್ನು ಪ್ರೇರೇಪಿಸುವದು. ಪರಿಸರದ ಬಗ್ಗೆ ಕಾಳಜಿಯುಳ್ಳ ಜನರನ್ನು ಕಲೆಹಾಕುವದು. ಇಂಥ ಜನರಾಗಲಿ, ಗುಂಪುಗಳಾಗಲೀ ತಾವೇ ನಿರ್ಣಯ ತೆಗೆದುಕೊಳ್ಳುವ ಸ್ವಾತಂತ್ರ್ಯ. ಪರಿಸರದ ಬಗ್ಗೆ ಕಳಕಳಿಯುಳ್ಳ ಗುಂಪುಗಳಲ್ಲಿ ವಿಶ್ವಾಸವನ್ನು ತುಂಬಿ ಅವರು ತಮ್ಮ ಸಮಸ್ಯೆಗಳನ್ನು ತಾವೇ ಬಗೆಹರಿಸಬೇಕೆಂಬುದೇ ನನ್ನ ವಿಚಾರ. ಇದು ಕೆಲಸಗಳ ವಿಕೇಂದ್ರೀಕರಣಕ್ಕೆ ದಾರಿಮಾಡಿಕೊಡುತ್ತದೆ. ಈ ವಿಕೇಂದ್ರೀಕೃತ

ಗುಂಪುಗಳು ಆರಂಭಿಸಿದ ಯಾವುದೇ ಚಳುವಳಿ ಹೆಚ್ಚು ಕಾಲ ಬಾಳುವದಲ್ಲದೆ ಇದು ನೀಡುವ ಪರಿಣಾಮವೂ ಶಾಶ್ವತವಾಗಿರುತ್ತದೆ.

6.2 ಈ ಎರಡು ವರ್ಷಗಳ ನನ್ನ ಕೆಲಸದಲ್ಲಿ ನಾನು ಸೋಲು ಗೆಲವು ಎರಡನ್ನು ಕಂಡಿದ್ದೇನೆ. ಒಟ್ಟಾರೆ ಜನರಲ್ಲಿ ಪರಿಸರದ ಬಗ್ಗೆ ಪ್ರಜ್ಞೆ ಹುಟ್ಟಿದಂತಾದರೂ ಇದು ಕೃತಿಗಿಳಿಯುವ ವಿಷಯದಲ್ಲಿ ನನಗೆ ಅನುಮಾನವಿದೆ. ಒಂದು ಗ್ರಾಮದಲ್ಲಿ ಮಾತ್ರ ನರ್ಸರಿ ಪ್ರಾರಂಭಿಸಿದ್ದಾರೆ. ಕೆಲವೇ ಹಳ್ಳಿಗಳ ಜನ ಗಿಡ ನೆಡುವ ಕೆಲಸ ಮಾಡಿದ್ದಾರೆ. ಗಿಡಮರಗಳನ್ನು ನೋಡುವ ಜನರ ದೃಷ್ಟಿಯೇನೋ ಬದಲಾಗಿದೆ. ಗಿಡಗಳು ಹುಟ್ಟಿ ಬೆಳೆಯಲು ತಾವು ಅರಣ್ಯವನ್ನು ಇದಷ್ಟು ಕಡಿಮೆ ರೀತಿಯಲ್ಲಿ ಅವಲಂಬಿಸಬೇಕೆಂಬ ಭಾವನೆ ಜನರಲ್ಲಿ ಬೆಳೆಯುತ್ತಿದೆ. ಜನರು ಸ್ವ ಇಚ್ಛೆಯಿಂದ ಅಸ್ತ್ರ ಒಲೆ ಹಾಕುವ ಕಾರ್ಯಕರ್ತರನ್ನು ಕರೆಯುತ್ತಿದ್ದಾರೆ. ಈ ಎಲ್ಲ ಸಾಧನೆಗಳು ನನಗೆ ಸಮಾಧಾನ ತಂದರೂ ಕಣ್ಣಿಗೆ ಎದ್ದು ಕಾಣದ ಇಂಥ ಕೆಲಸಗಳನ್ನು ಅಳೆಯುವದು ಕಷ್ಟ. ಎರಡು ವರ್ಷದಲ್ಲಿನ ಈ ಪರಿಸರ ದೃಷ್ಟಿಯಲ್ಲಿಯ ಬದಲಾವಣೆಯನ್ನು ಗುರುತಿಸುವದೂ ಸುಲಭವಲ್ಲ. ಜನರ ಮನೋಧರ್ಮವನ್ನು ಬದಲಿಸುವದೂ ಒಂದು 'ರಚನಾತ್ಮಕ ಕೆಲಸವೇ ಎಂದು ನನ್ನ ಅನಿಸಿಕೆ. 'ಏಕೆಂದರೆ ದೃಷ್ಟಿಯಲ್ಲಿ ಬದಲಾವಣೆಯಾದಾಗ ಅದಕ್ಕನುಗುಣವಾದ ಕ್ರಿಯೆ ಹುಟ್ಟಿಯೇ ಹುಟ್ಟುತ್ತದೆ.

6.3 ಅಪ್ಪಿಕೋದಲ್ಲಿ ನನ್ನನ್ನು ನಾನು ತೊಡಗಿಸಿಕೊಂಡಿದ್ದು ಅತಿಯಾಯಿತೇನೋ ಎಂದು ಅನಿಸುತ್ತದೆ. ಯಾಕೆಂದರೆ ಅಪ್ಪಿಕೋ ಮತ್ತು ನಾನು ಒಂದೇ ಎಂದು ಜನ ಭಾವಿಸಿದ್ದಾರೆ. ಒಬ್ಬನೇ ವ್ಯಕ್ತಿಯ ಮೇಲೆ ಅಪ್ಪಿಕೋ ಅವಲಂಬಿಸುವದು ಅಪಾಯಕಾರಿ. ಈಗಲಾದರೂ, ನಾನಿಲ್ಲದಿದ್ದರೂ ಅಪ್ಪಿಕೋ ಕೆಲಸ ನಡೆಯುವ ಕ್ಷೇತ್ರವೆಂದರೆ ಸಿರ್ಸಿ ಭಾಗ ಮಾತ್ರ. ಇದಕ್ಕೆ ನಾನು ಕೆಲಸ ಮಾಡುವ ರೀತಿಯೂ ಕಾರಣವಾಗಿರಬಹುದು. ಹೀಗೆಯೇ ಮುಂದುವರಿದರೆ ಪಾಂಡುರಂಗ ಗುರುವಾಗುವ ಸಂಭವವಿದೆ. ಅದಿಲ್ಲವಾದಲ್ಲಿ ಹುಲ್ಲನ್ನು ಸಹ ಬೆಳೆಯಗೊಡದ ಅಶ್ವತ್ಥ ವೃಕ್ಷವಾಗುವ ಸಂಭವವಿದೆ.

6.4 ಅಪ್ಪಿಕೋದಲ್ಲಿ ಕೆಲಸ ಮಾಡುವದರಿಂದ ಬಡ ಜನರಿಗೆ ಸಹಾಯವಾಗುವದು ಹೇಗೆ ಎಂದು ಬಹಳಷ್ಟು ಜನ ನನ್ನನ್ನು ಕೇಳಿದ್ದಾರೆ. ಅರಣ್ಯದ ಸುತ್ತಮುತ್ತ ಇರುವ ಜನ ತಮ್ಮ ಜೀವನಕ್ಕಾಗಿ ಅರಣ್ಯವನ್ನೇ ಅವಲಂಬಿಸಿದ್ದಾರೆ. ಬಹಳಷ್ಟು ಹಳ್ಳಿಗಳಲ್ಲಿ ಬೆತ್ತ ಬಿದಿರುಗಳನ್ನು ಹೆಣೆಯುವ ಜನ ಇದ್ದಾರೆ. ಔಷಧ ಸಸ್ಯಗಳನ್ನು ಸಂಗ್ರಹಿಸಿ ಕೊಡುವವರಿದ್ದಾರೆ. ಅರಣ್ಯ ನಾಶ ಅವರ ಜೀವನ ಗತಿಯನ್ನೇ ಹಾಳು ಮಾಡಿದೆ. ಅವರ ಜೀವನಕ್ಕೆ ಆಧಾರವಾಗಿದ್ದ ಅಡವಿಯನ್ನು ಉಳಿಸಲು ಪ್ರಯತ್ನಿಸುವದರ ಮೂಲಕ ಈ ಬಡ ಜನತೆಗೆ ನನ್ನಿಂದ ಸಹಾಯ ಮಾಡಿದ್ದೇನೆಂದು ನನ್ನ ನಂಬಿಗೆ. ಅಡವಿಯ ನಾಶದಿಂದ ಸರಾಗವಾಗಿ ಸಿಗುವ ನೀರು ಇಲ್ಲವಾಗಿ ಮೈಲಿಗೆ ಹೋದರೂ ಹನಿಯೂ ಸಹ ದೊರಕದೆ ಪರದಾಡುತ್ತಿರುವ ಜನರ ಜೀವನದ ಪ್ರತ್ಯಕ್ಷ ಅನುಭವ ನನಗಿದೆ. ಪ್ರಕೃತಿಯ ಮಡಿಲಲ್ಲಿ ವಾಸಿಸುವ ಈ ಮಣ್ಣಿನ ಮಕ್ಕಳಿಗೆ (ಜೀವನ ನಿರ್ವಹಣೆಗಾಗಿ) ಅರಣ್ಯದ ಹುಟ್ಟುವಳಿಗಳ ಮೇಲೆ ಹಕ್ಕಿದೆ ಎಂಬುದು ನನ್ನ ಸ್ಪಷ್ಟವಾದ ವಿಚಾರ. ಆದರೆ ಆಗುತ್ತಿರುವದೇನು ? ಅರಣ್ಯ ಶ್ರೀಮಂತರ ಪ್ರತಿಷ್ಠಿತರ ಭೋಗದ ವಸ್ತುವಾಗಿ ಪರಿಣಮಿಸಿದೆ.

6.5 ಒಂದು ವ್ಯವಸ್ಥಿತವಾದ ಸಾಮಾಜಿಕ ಜೀವನ ಪದ್ಧತಿಯಲ್ಲಿ ಸುರಕ್ಷಿತ ಜೀವನ [illegible] ನನ್ನ ಎರಡು ವರ್ಷಗಳ ಸಂಚಾರಿ ಜೀವನವೆಂಬುದು ಕಲ್ಪನೆಗೂ ನಿಲುಕದ ವಿಷಯ. ಇಲ್ಲಿಯ ನೌಕರಿ ಹಿಡಿದು ಸುರಕ್ಷಿತ ಜೀವನ ಸಾಗಿಸೆಂದು ಕೆಲವರು ಸಲಹೆ ಮಾಡಿದರು. ಜನರಿಗೆ ನನ್ನ ಕೆಲಸವನ್ನು ಅರ್ಥಮಾಡಿಕೊಳ್ಳುವುದು ಕಷ್ಟ. ಅವರಿಗೆ ನಾನೊಬ್ಬ ಹುಚ್ಚನಂತೆ ತೋರಬಹುದು. ಇಷ್ಟೆಲ್ಲ ಮಾಡಿದ್ದು ಚುನಾವಣೆಯ ತಯಾರಿಗಾಗಿ ಎಂದು ಜನ ಭಾವಿಸಿದರು. ಆದರೆ ನಾನೊಬ್ಬ ರಾಜಕೀಯೇತರ ತಟಸ್ಥ ವ್ಯಕ್ತಿಯೆಂದು ಈಗ ತಿಳಿದಿದೆ. ಯಾವುದೇ ವ್ಯವಸ್ಥೆಯೊಂದಿಗೆ ಹೊಂದಾಣಿಕೆ ಮಾಡಿಕೊಳ್ಳಲಾಗದ ನಾನೊಬ್ಬ ವಿಚಿತ್ರ ಮನುಷ್ಯನಂತೆ.

6.6 ಇಂಥ ಕೆಲಸದಲ್ಲಿ ತೊಡಗುವ ಮೊದಲು ನಾನು ಸ್ವತಂತ್ರ ಬರಹಗಾರನಾಗಿ ಹಣ ಗಳಿಸಬೇಕೆಂದು ಯೋಜಿಸಿದ್ದೆ. ಆರಂಭದಲ್ಲಿ ಯಶಸ್ಸು ಕಂಡರೂ ಈಗ ಪತ್ರಿಕಾ ಬರಹಗಾರನಾಗಿ ನಾನು ಗಳಿಸುತ್ತಿಲ್ಲ. ಸಂಶೋಧನಾ ಪ್ರಬಂಧಗಳನ್ನು ಬರೆಯಬೇಕೆಂಬ ಹಂಬಲವಿದ್ದರೂ, ನನ್ನ ಕಾರ್ಯಕ್ಷೇತ್ರ ವಿಸ್ತೃತವಾಗಿರುವ ಕಾರಣ ನನಗೆ ಕುಳಿತು ಬರೆಯಲು ಹೊತ್ತೇ ಇಲ್ಲ. ನನ್ನ ಮೂಲಭೂತ ಅವಶ್ಯಕತೆಗಳನ್ನು ಪೂರೈಸುವಷ್ಟಾದರೂ ಆರ್ಥಿಕ ಸಾಮರ್ಥ್ಯ ನನಗಿರಬೇಕು. ನಾನಿನ್ನೂ ಆ ಸಾಮರ್ಥ್ಯ ಗಳಿಸಿಲ್ಲ. ಸದ್ಯ ಜನರ ದೇಣಿಗೆಯಿಂದ ಅಪ್ಪಿಕೊ ಪುಸ್ತಕಗಳನ್ನು ಮಾರಿ ಬಂದ ಹಣದಿಂದ ನನ್ನ ಖರ್ಚು ನೀಗುತ್ತಿದೆ. ಈ ಎರಡು ವರ್ಷ ನಾನು ಬದುಕಿದ್ದು ಜನರ ವಿಶ್ವಾಸ, ಆದರೆ ಆತಿಥ್ಯಗಳಿಂದ. ಒಂದು ವೇಳೆ ನಾನು ಮದುವೆಯಾದರೆ ? ಈ ಎಲ್ಲ ವಿಷಯಗಳ ಕುರಿತು ನಾನಿನ್ನೂ ಗಂಭೀರವಾಗಿ ವಿಚಾರ ಮಾಡಿಲ್ಲ. ನಾನು ನನ್ನ ಕೆಲಸ ಮುಂದುವರಿಸಬೇಕಾದರೆ ಆರ್ಥಿಕ ಭದ್ರತೆಯಿಂದ ಕೂಡಿರಬೇಕು ಎಂಬುದು ಮಾತ್ರ ನನಗೆ ಗೊತ್ತು.

7.0 ಭವಿಷ್ಯದತ್ತ ಒಂದು ನೋಟ

7.1 1983 ರಲ್ಲಿ ನಾನು ಈ ಕೆಲಸ ಆರಂಭಿಸುವಾಗ ನಾನು ಏನು ಮಾಡಬೇಕೆಂಬ ಬಗ್ಗೆ ನನ್ನ ವಿಚಾರ ಅಸ್ಪಷ್ಟವಾಗಿತ್ತು. ಈಗ ಅಪ್ಪಿಕೊ ಆಂದೋಲನ ನನ್ನ ವಿಚಾರಗಳಿಗೆ ಸ್ಪಷ್ಟ ರೂಪವನ್ನು ಕೊಟ್ಟಿದೆ. ನನ್ನ ಪಾತ್ರವನ್ನು ನಾನು ವಿಶ್ಲೇಷಿಸಿಕೊಳ್ಳುವಾಗ ನನಗೆ ಅನಿಸಿದ್ದೇನೆಂದರೆ ನಾನು ಕೆಲಸ ಮಾಡುವ ರೀತಿ ಬದಲಾಗಬೇಕು. ಮತ್ತು ಜನ ಪರಿಸರದ ಬಗ್ಗೆ ಕೆಲಸ ಮಾಡಲು ಸ್ವಯಂ ಪ್ರೇರಣೆಯಿಂದ ಮುಂದೆ ಬರಲು ಅನುವು ಮಾಡಿಕೊಡಬೇಕು. ಇಲ್ಲಿಯವರೆಗೆ ನಾನು ನನ್ನನ್ನು ಆಂದೋಲನದಲ್ಲಿ ಬಿಡುವಿಲ್ಲದೆ ತೊಡಗಿಸಿಕೊಂಡಿದ್ದೆ. ಆದರೆ ಇನ್ನು ಮುಂದೆ ಪರಿಸರವನ್ನು ಹಾಳು ಮಾಡದ ಪರ್ಯಾಯವಾದ ಅಭಿವೃದ್ಧಿ ಹೇಗೆಂಬುದನ್ನು ನಿಜ ಜೀವನದಲ್ಲಿ ತೋರಿಸಿಕೊಡಬೇಕಾಗಿದೆ. ಉಪದೇಶಿಸುವುದು ಸುಲಭ. ಪಾಲಿಸುವುದು ಕಷ್ಟ. ಇದನ್ನು ಸಾಧಿಸಲು ನಾನು ಹಳ್ಳಿಯಲ್ಲಿ ನೆಲೆಗೊಳ್ಳಬೇಕು. ನಂತರ ಪ್ರಕೃತಿ ಸಂಪತ್ತನ್ನು ಉಪಯೋಗಿಸುವ ಹಕ್ಕು ಬಡ ಜನತೆಗೆ ಸಿಗುವಂತೆ ಮಾಡಬೇಕು. ಅಲ್ಲದೆ ಪ್ರಕೃತಿಯೊಂದಿಗೆ ಸಾಮರಸ್ಯವನ್ನು ಸಾಧಿಸಬೇಕು.

ಪಾಂಡುರಂಗ ಹೆಗಡೆ

ವಿಳಾಸ:
ಪಾಂಡುರಂಗ ಹೆಗಡೆ
ಪರಿಸರ ಸಂರಕ್ಷಣಾ ಕೇಂದ್ರ,
ಮಲೇಮಳಗಿ ಬಿಲ್ಡಿಂಗ್, ಸಿರಸಿ 581 401.
ಕರ್ನಾಟಕ.